264

ತಾರೀಖು 10ನೇ ಫಿಬ್ರವರೀ 1887.

ನಂ. 245.—1886ನೇ ಇಸವಿ ಡಿಕಂಬರ್ 22ನೇ ಮಕ್ತುಂ 1461ನೇ ನಂಬರ್ ಇಸ್ತಿಹಾರ್‌ನಾಮೆಯ 2ನೇ ಪ್ಯಾರಾ ಅನುಸರಿಸಿ ಮೈಸೂರು ಸೀಮೆಯಲ್ಲಿ ಜಮ್ಮಿ ಪಡೆಯುವದಕ್ಕೆ ಗವರ್ಮೆಂಟಿನ ಮಂಜೂರಾತಿಗೋಸ್ಕರ ದರಖಾಸ್ತು ಕಳುಹಿಸುವ ಆಫೀಸರುಗಳು, ಅವರ ದರಖಾಸ್ತಿನೊಂಬಿಗೆ ಇದರಡೀ ಕಂಡ ತಪಶೀಲ್‌ಗಳು ಅಡಗಿರುವ ಬಂದು ತಖ್ತೆಯನ್ನು ಕಳುಹಿಸತಕ್ಕದ್ದು.

1. ದರಖಾಸ್ತು ಮಾಡುವ ಆಫೀಸರರ ಹೆಸರು ಮತ್ತು ಉದ್ಯೋಗದ ಹೆಸರು.
2. ಪಡೆಯುವದಕ್ಕೆ ಉದ್ದೇಶಿಸಲ್ಪಟ್ಟ ಜಮ್ಮಿ ಇರತಕ್ಕ ತಾಲ್ಲೂಕು ಮತ್ತು ಗ್ರಾಮದ ಹೆಸರು.
3. ತರೀಯೇ ಖುಷ್ಕಿಯೇ ಅಥವಾ ಬಾಗಾಯತೇ.
4. ಸರ್ಕಾರ್ ಅಥವಾ ಇನಾಮೆ.
5. ಬೀಜವರಿ, ವ ಕಂಡಾಯವೇನಾದರೂ ಇದ್ದರೆ ಅದು.
6. ಖರೀದಿ ಮೂಲಕವೇ ಆಧಾರದ ಮೂಲಕವೇ ದಾನ ವಗೈರೆ ಮೂಲಕವಾಗಿಯೇ ಯೆಂಬ ತಪಶೀಲು.
7. ಪ್ರತಿಫಲವೇನಾದರೂ ಇದ್ದರೆ ಅದು.

ತಾರೀಖು 14ನೇ ಫಿಬ್ರವರೀ 1887.

ನಂ. 246.—ದಿವಾನರವರ ಆಫೀಸಿನ ಅಸಿಸ್ಟೆಂಟ್ ಕಮ್ಮಿಷನರ್ ಮೆ|| ಯಂ. ನಾರಾಯಣರಾಯರಿಗೆ, 1887ನೇ ಇಸವಿ ಫಿಬ್ರವರೀ 3ನೇ ಮಕ್ತುಂ ಲಾಗಾಯತು ಯಾ ಅವರು ಉಪಯೋಗಿಸಿಕೊಂಡ ತಾರೀಖು ಮೊದಲು ಮೂರುವಾರಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 22ನೇ ಡಿಕಂಬರ್ 1886.

ಕ್ಯಾಂಪ್ ನಂಬರ್ 1461.—ಸರ್ಕಾರ್ ನವುಕರರು ಜಮ್ಮಿ ಉಂಟಾಗಿರುವ ವಿಷಯದಲ್ಲಿ 1870ನೇ ಇಸವಿ ಜುಲೈ 6ನೇ ಮಕ್ತುಂ 123ನೇ ನಂಬರು ಮತ್ತು ಅದೇ ಇಸವಿ ನವಂಬರ್ 10ನೇ ಮಕ್ತುಂ 260ನೇ ನಂಬರು ಈ ಇಸ್ತಿಹಾರ್‌ನಾಮೆಗಳಿಂದ ಬದಲಾಯಿಸಲ್ಪಟ್ಟಂತೆ 1863ನೇ ಇಸವಿ ಮೇ 29ನೇ ಮಕ್ತುಮಿನ ರೂಲ್ಸ್‌ಗಳಿಗೆ ತಮಾಂ ಸರ್ಕಾರ್ ನವುಕರರೂ ನಿಗೇ ಕೊಡತಕ್ಕದ್ದು. ಸದರೀ ರೂಲ್ಸ್‌ಗಳ ಅಮಲ್ ಚಲಾವಣಿ ದೆಕೆಯಿಂದ ತಪ್ಪಿಸಿಕೊಳ್ಳುವದಕ್ಕೆ ಯಾರಾದರೂ ಪ್ರಯತ್ನ ಪಟ್ಟಿರೆ, ಅಂಥಾ ತಪ್ಪಿತಸ್ಥನು ಸರ್ಕಾರ್ ನವುಕರಿಯಿಂದ ತಗ್ಗೈರ್ ಮಾಡಲ್ಪಡಲಿಕ್ಕಾಗಲೀ ಗವರ್ಮೆಂಟಿನವರು ಯುಕ್ತವೆಂದು ಭಾವಿಸುವಂಥಾ ಇತರ ಯಾವದಾದರೂ ಇಲಾಖೇ ಮೂಲಕವಾದ ಶೀಕ್ಷೆಗಾಗಲಿ ಗುರಿಯಾಗುವದಕ್ಕೆ ಒಳಪಡತಕ್ಕದ್ದು.

2. ಗವರ್ಮೆಂಟಿನಿಂದ ಸಾಧಾರಣವಾಗಿ ಮೊಕರರ್ರಾಡಲ್ಪಡುವ ಆಫೀಸರುಗಳ ವಿಷಯದಲ್ಲಿ ಅವರುಗಳು, ಖುದ್ದಾಗಿಯಾಗಲೀ ಪರೋಕ್ಷವಾಗಿಯಾಗಲೀ ತಮ್ಮ ಹೆಸರಿನಲ್ಲಿಯಾದರೂ ಅಥವಾ ತಮಿಗೋಸ್ಕರ ಇತರರ ಹೆಸರಿನಲ್ಲಿಯಾದರೂ ಯಾವದಾದರೂ ಭೂಸ್ಥಿತಿಯನ್ನಾಗಲೀ ಅಥವಾ ಅದರಲ್ಲಿ ಯಾವ ಸಂಬಂಧವನ್ನಾಗಲೀ ಖುಷ್ಕಿಖರೀದಿ ಮೂಲಕವಾದರೂ ಆಧಾರವಾಗಿಯಾದರೂ ವರ್ಗಮೂಲಕವಾದರೂ ಅಥವಾ ಇನ್ಯಾವಮೂಲಕವಾದರೂ ಪಡೆಯುವದಕ್ಕೆ ಮುಂಚಿತವಾಗಿ ಗವರ್ಮೆಂಟಿನವರ ಮಂಜೂರಾತಿಯನ್ನು ಪಡೆಯತಕ್ಕದ್ದು. ಅಂಥಾ ಆಫೀಸರುಗಳ ವಿಷಯದಲ್ಲಿ ಅವರುಗಳ ಸ್ವಾಧೀನಕ್ಕೆ ಭೂಸ್ಥಿತಿಯಾಗಲೀ ಅದರಲ್ಲಿ ಸಂಬಂಧವಾಗಲೀ ಪಿತರಾರ್ಜಿತ ಹಕ್ಕಿನಮೂಲಕವಾದರೂ ಯಾ ದಾಯಭಾಗದ ಮೂಲಕವಾದರೂ ಪಡೆದಾಗ, ಡೆಪ್ಯುಟಿ ಕಮ್ಮಿಷ್ಟರವರು, 1863ನೇ ಇಸವಿ ಮೇ 29ನೇ ಮಕ್ತುಂವುಳ್ಳ ಇಸ್ತಿಹಾರ್‌ನಾಮೆಯ 3ನೇ ಕಲಂ ಅನುಸರಿಸಿ ಹಿಡುವಳಿ ಹಕ್ಕನ್ನು ರಿಜಿಸ್ಟರ್ ಮಾಡಿದ ತರುವಾಯ, ಸದರೀ ಸಂಗತಿಯನ್ನು ದಿವಾನರವರಿಗೆ ರಿಪೋರ್ಟು ಮಾಡತಕ್ಕದ್ದು.

ಹುಕ್ಕುಂ ಬವೋಜೀವ್,
ಆರ್. ವಿಜಯೀಂದ್ರರಾವ್,
ಜೇಫ್ ಸಕ್ರಿಟೇರಿ.